ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

2

ಇಲಾಖೆ / ವಿಷಯ : DEPARTMENT / SUBJECT: ವಿಧಾನಪರಿಷತ್ - ಸದನ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ ದಿನಾಂಕ : DATE : 8/1/2021

# ಪರಿಷತ್ ಗದ್ದಲ: ಸದನ ಸಮಿತಿ ರದ್ದತಿಗೆ ಆಯನೂರು ಆಗ್ರಹ

ಪ್ರಜಾವಾಣಿ ವಾರ್ತೆ 8-1-2021

ಬೆಂಗಳೂರು: 'ವಿಧಾನಪರಿಷತ್‌ನಲ್ಲಿ ಡಿ. 15ರಂದು ನಡೆದ ಅಹಿತಕರ ಘಟನೆ ಬಗ್ಗೆ ಪರಿಶೀಲಿಸಿ ವರದಿ ನೀಡಲು ಸದನ ಸಮಿತಿ ರಚಿಸುವ ವೇಳೆ ನಿಯಮಬಾಹಿರ ಹಾಗೂ ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳಲಾಗಿದೆ. ಹೀಗಾಗಿ ಸಮಿತಿ ರದ್ದು ಮಾಡಿ ಈ ವಿಷಯವನ್ನು ನೀತಿ ನಿರೂಪಣಾ ಸಮಿತಿಗೆ ವಹಿಸಬೇಕು' ಎಂದು ಸಭಾಪತಿಗೆ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಪತ್ರ ಬರೆದಿದ್ದಾರೆ.

'ಸಮಿತಿಗೆ ಮರಿತಿಬ್ಬೇಗೌಡ ಅವರನ್ನು ಅಧ್ಯಕ್ಷರನ್ನಾಗಿ ಮತ್ತು ಕಾಂಗ್ರೆಸ್, ಬಿಜೆಪಿಯ ತಲಾ ಇಬ್ಬರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ. ಮರಿತಿಬ್ಬೇಗೌಡ ಅವರು ತಾಂತ್ರಿಕವಾಗಿ ಜೆಡಿಎಸ್ ಸದಸ್ಯರಾಗಿದ್ದರೂ ಮಾನಸಿಕವಾಗಿ ಹಾಗೂ ಸದನದಲ್ಲಿ ಅವರ ನಡವಳಿಕೆ ಹಾಗೂ ನಿಲುವುಗಳಲ್ಲಿ ಅವರು ಬಹಿರಂಗವಾಗಿಯೇ ಕಾಂಗ್ರೆಸ್ ಪಕ್ಷದವರಾಗಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಹೀಗಾಗಿ, ಸಮಿತಿ ರಚನೆಯಲ್ಲಿ ಪಕ್ಷಪಾತ ನೀತಿ ಅನುಸರಿಸಲಾಗಿದೆ' ಎಂದು ಅವರು ದೂರಿದ್ದಾರೆ.

'ಉಪ ಸಭಾಪತಿ ಮೇಲೆ ದೈಹಿಕ ಹಲ್ಲೆ ನಡೆಸಿದ ಘಟನೆಯ ಸೂತ್ರಧಾರ ಹರಿಪ್ರಸಾದ್ ಅವರನ್ನು ಸಮಿತಿಯ ಸದಸ್ಯರನ್ನಾಗಿ ನೇಮಿಸಿರುವ ಉದ್ದೇಶ ಪ್ರಶ್ನಾರ್ಹವಾಗಿದೆ' ಎಂದೂ ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

'ಪರಿಷತ್ತಿನಿಂದ ರಚಿಸುವ ಎಲ್ಲ ಸಮಿತಿ ಮತ್ತು ಸದನ ಸಮಿತಿಗಳಿಗೆ ಆಯಾ ಪಕ್ಷದ ಮುಖ್ಯ ಸಚೇತಕರಿಂದ ಸದಸ್ಯರ ಹೆಸರು ಪಡೆಯುವ ಪರಿಪಾಟ ಅನುಸರಿಸಲಾಗುತ್ತದೆ. ಆದರೆ, ಈ ವಿಷಯದಲ್ಲಿ ಏಕಪಕ್ಷೀಯವಾಗಿ ಸದಸ್ಯರನ್ನು ಆಯ್ಕೆ ಮಾಡಿದ್ದೀರಿ. ಅಲ್ಲದೆ, ಪರಿಶೀಲನಾ ಅಂಶಗಳನ್ನು ಗಮನಿಸಿದಾಗ ಸಮಿತಿ ತನ್ನ ವ್ಯಾಪ್ತಿಯಲ್ಲಿ ಪರಿಶೀಲಿಸಲು ಸಾಧ್ಯವಾಗದ ಅಂಶಗಳನ್ನು ನಮೂದಿಸಿರುವುದು ಕಂಡುಬರುತ್ತದೆ' ಎಂದೂ ಪತ್ರದಲ್ಲಿ ಹೇಳಿದ್ದಾರೆ.